ದಿನಾಂಕ 17-02-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ . ನಾನು ಈ ದಿನ ವಾದಿಯ ಕೋರಿಕೆ ಮೇರೆಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ವಾದಿ ಮತ್ತು ಅವರ ಗಂಡ ಗುಡ್ಡಪ್ಪ ಕಾಳಿ ಇವರ ಮದುವೆ ರಾಣೇಬೆನ್ನೂರು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಆಗಿರುತ್ತದೆ. ನಾನು ಊರ ಮುಖಂಡರ ಜೊತೆ ವಾದಿಯ ಆಹ್ವಾನದ ಮೇರೆಗೆ ಮದುವೆಗೆ ಹಾಜರಾಗಿರುತ್ತೇನೆ. ಮದುವೆಗೆ ಮೌಖಿಕವಾಗಿ ತಿಳಿಸಿದ್ದು ಯಾವುದೇ ಆಹ್ವಾನ ಪತ್ರಿಕೆ ನೀಡಿರುವುದಿಲ್ಲ. ಆ ದಿನ 12-13 ಜನ ಸೇರಿದ್ದೆವು. ವಾದಿ ಮತ್ತು ಗುಡ್ಡಪ್ಪ ಕಾಳಿ ಇವರ ನಡುವೆ ಯಾವುದೇ ವಿವಾಹ ಆಗಿಲ್ಲದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಹಿಂದೆ ನಿಂತಿದ್ದು ನನ್ನ ಎದುರುಗಡೆ ಸಹಿ ಮಾಡಿರುವುದಿಲ್ಲ. ಆ ದಿನ ಹೇಮಪ್ಪ ಗೊಲ್ಲರ, ತಿಮ್ಮಪ್ಪ ಗೊಲ್ಲರ, ಗುರುಬಸಪ್ಪ ಗೊಲ್ಲರ, ಕೆಂಚಪ್ಪ ಶೇತಸನದಿ ಹಾಗೂ ಇನ್ನಿತರರು ಹಾಜರು ಇರುತ್ತಾರೆ. ಅವರ ಎದುರುಗಡೆ ಸಹಿ ಮಾಡಿರುತ್ತೇನೆ. ಅವರು ಸಹಿ ಮಾಡಿದ ದಾಖಲೆಯನ್ನು ನಾನು ನೋಡಿರುತ್ತೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆ ದಿನ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಮದುವೆ ಕಾಲಕ್ಕೆ ಯಾವುದೇ ಮಂತ್ರ ಪಠಣ ಮಾಡಿರುವುದಿಲ್ಲ ಎಂದರೆ ಸರಿ. ಸಿಹಿ ಹಂಚಿರುತ್ತಾರೆ. ವಾದಿ ಹಾಗೂ ಗುಡ್ಡಪ್ಪ ಕಾಳಿ ಅವರೊಂದಿಗೆ ಹೇಮಪ್ಪ ಗೊಲ್ಲರ, ತಿಮ್ಮಪ್ಪ ಗೊಲ್ಲರ, ಗುರುಬಸಪ್ಪ, ಕೆಂಚಪ್ಪ ರವರು ಸಹಿ ಮಾಡಿರುತ್ತಾರೆ. ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ಗುಡ್ಡಪ್ಪ ಕಾಳಿ ರವರ ತಂದೆಯ ಹೆಸರು ಹಾಲಪ್ಪ, ತಾಯಿ ಗೌರಮ್ಮ . ವಿವಾಹದ ದಿನಾಂಕ 22-04-2000 ಆಗಿರುತ್ತದೆ. 1991 ರಲ್ಲಿ 5 ನೇ ಪ್ರತಿವಾದಿಯೊಂದಿಗೆ ಗುಡ್ಡಪ್ಪ ಕಾಳಿ ರವರು ವಿವಾಹ ಆಗಿದ್ದು, 2000 ನೇ ಇಸವಿ ವೇಳೆಗೆ ಅವರಿಗೆ 6 ನೇ ಪ್ರತಿವಾದಿ ಹಾಗೂ ಮೃತ 7 ನೇ ಪ್ರತಿವಾದಿ ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಅವರೆಲ್ಲರೂ 1 ನೇ ಪ್ರತಿವಾದಿಯೊಂದಿಗೆ ಬೇಲೂರು ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

3. ವಾದಿ ಹಾಗೂ ನಮ್ಮ ಮನೆ ಅಕ್ಕಪಕ್ಕದಲ್ಲಿ ಇರುತ್ತವೆ ಎಂದರೆ ಸರಿ. ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸರ್ವೆ ನಂಬರ್ ನಿರ್ದಿಷ್ಟವಾಗಿ ಹೇಳಲಾರೆ. ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. ಆದರೆ, ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಸ್ವತ್ತುಗಳು 1, 5, 6 ಮತ್ತು ಮೃತ 7 ನೇ ಪ್ರತಿವಾದಿಗಳ ಸಾಮೂಹಿಕ ಸ್ವಾಧೀನದಲ್ಲಿ ಇದ್ದು ಅವರ ಹೆಸರಿನಲ್ಲಿಯೇ ದಾಖಲೆಗಳು ಇರುತ್ತವೆ ಎಂದರೆ ನನಗೆ ತಿಳಿದಿಲ್ಲ.

4. ಸಾಕ್ಷಿದಾರರಿಗೆ ನಿಪಿ 1 ರ ಆರ್ ಟಿ ಸಿ ಯನ್ನು ತೋರಿಸಲಾಗಿ ಅದರಲ್ಲಿ ಪ್ರತಿವಾದಿಗಳ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೇರ್ಪಡೆ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಗಳನ್ನು ಪ್ರಶ್ನಿಸಿ ವಾದಿ ಇದುವರೆಗೂ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 4 ನೇ ಕಂಡಿಕೆಯಲ್ಲಿ ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಗುಡ್ಡಪ್ಪ ಕಾಳಿ ರವರ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ವಾದಿಗೆ ಮಕ್ಕಳಿರುವುದಿಲ್ಲ. ಆಕೆಗೆ ಯಾವುದೇ ವಿವಾಹ ಆಗಿಲ್ಲದಿದ್ದರೂ ಗುಡ್ಡಪ್ಪ ಕಾಳಿ ರವರೊಂದಿಗೆ ಮದುವೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.